ಅ) ಧಾರವಾಡ ಕೃಷಿ ವಿಶ್ವವಿದ್ಯಾನಿಲಯದ ಹಣಕಾಸು ನಿರ್ವಹಣೆಯಲ್ಲಿ ಅವ್ಯವಹಾರ ಕಂಡುಬಂದಿದೆಯೇ

ಆ) ಅವ್ಯವಹಾರ ಯಾವ ಸ್ವರೂಪದಲ್ಲಿ ನಡೆದಿದೆ ಹಾಗೂ ಅವ್ಯವಹಾರದ ಮೊತ್ತವೆಷ್ಟು?

ಇ) ಈ ಅಕ್ರಮ ಅಸಮರ್ಪಕ ಹಣಕಾಸು ನಿರ್ವಹಣೆಯನ್ನು ಬೆಳಕಿಗೆ ತಂದವರು ಯಾರು?

ಈ) ಸದರಿ ಅವ್ಯವಹಾರ ಆರೋಪವನ್ನು ಧಾರವಾಡ ಕೃಷಿ ವಿ.ವಿ.ಯು ಒಪ್ಪಿಕೊಂಡಿದೆಯೇ?

ಉ) ಒಪ್ಪಿಕೊಂಡಿದ್ದಲ್ಲಿ ಇದಕ್ಕೆ ಕಾರಣರ್ಯಾರು; ಇಂತಹವರ ಮೇಲೆ ಯಾವ ಕ್ರಮ ಜರುಗಿಸಲಾಗಿದೆ; (ವಿವರ ನೀಡುವುದು)?

ಶ್ರೀ ಕೆ. ಶ್ರೀನಿವಾಸಗೌಡ (ಕೃಷಿ ಸಚಿವರು) :

ಅ) ಶ್ರೀ ಬಿ.ಎಸ್. ಅಂಚೆಟಗೇರಿ, ಕಾರ್ಪೋರೇಟರ್ ಹುಬ್ಬಳ್ಳಿ–ಧಾರವಾಡ ಮಹಾನಗರ ಪಾಲಿಕೆ ಇವರು ಧಾರವಾಡ ಕೃಷಿ ವಿಶ್ವವಿದ್ಯಾನಿಲಯದಲ್ಲಿಕೈಗೊಳ್ಳಲಾದ ಕಾಮಗಾರಿಗಳಲ್ಲಿ ಅವ್ಯವಹಾರಗಳು ನಡೆದಿದೆ ಎಂದು ಸರ್ಕಾರಕ್ಕೆ ಘನವೆತ್ತ ರಾಜ್ಯಪಾಲರಿಗೆ ಹಾಗೂ ಲೋಕಾಯುಕ್ತದವರಿಗೆ ಆರೋಪ ಮಾಡಿದ್ದರು. ಪ್ರತಿಯಾಗಿ ಕೃಷಿ ವಿಶ್ವವಿದ್ಯಾಲಯದವರು, ಮಾಡಿರುವ ಆರೋಪಗಳನ್ನು ತಳ್ಳಿ ಹಾಕುತ್ತಾ, ಸೂಕ್ತವಾದ ಉತ್ತರಗಳನ್ನು ಸಂಬಂಧಪಟ್ಟ ಕಾಗದ ಪತ್ರಗಳು, ದಾಖಲೆಗಳನ್ನು ನೀಡಲಾಗಿದ್ದು ಇವು ಲೋಕಾಯುಕ್ತ ಕಛೇರಿಯ ಪರಿಶೀಲನೆಯಲ್ಲಿವೆ.

ಆ) ಆ ಉತ್ತರದ ಹಿನ್ನೆಲೆಯಲ್ಲಿ ಉದ್ಭವಿಸುವುದಿಲ್ಲ.

ಇ) ಶ್ರೀ ಬಿ.ಎಸ್. ಅಂಚೆಟಗೇರಿ, ಕಾರ್ಪೋರೇಟರ್ ಹುಬ್ಬಳ್ಳಿ–ಧಾರವಾಡ ಮಹಾನಗರ ಪಾಲಿಕೆ ಇವರು ಆರೋಪ ಮಾಡಿದ್ದಾರೆ.

ಈ) ಒಪ್ಪಿಕೊಂಡಿರುವುದಿಲ್ಲ.

ಉ) ದೂರು ಲೋಕಾಯುಕ್ತರ ಪರಿಶೀಲನೆಯಲ್ಲಿದೆ. ಲೋಕಾಯುಕ್ತರ ವರದಿಯ ಮೇಲೆ ಸೂಕ್ತ ಕ್ರಮ ಕೈಗೊಳ್ಳಲಾಗುವುದು.

461(742) ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ (ಔರದ್) : ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ ?

ಅ) ರಾಜ್ಯದಲ್ಲಿ ಕಳೆದ 3 ವರ್ಷಗಳಿಂದ ಸತತವಾಗಿ ಬರಗಾಲವಿರುವುದರಿಂದ ಈ ಸಮಯದಲ್ಲಿ ಜಾನುವಾರುಗಳಿಗೆ ಹಾಗೂ ಕೋಳಿಗಳಿಗೆ ತಗಲುತ್ತಿರುವ ಕಾಯಿಲೆಗಳನ್ನು ನಿಭಾಯಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು;

ಆ) ರಾಜ್ಯಾದ್ಯಂತ ವಿವಿಧ ಜಿಲ್ಲೆಗಳಲ್ಲಿ ಮೇಲ್ಕಂಡ ಅವಧಿಯಲ್ಲಿ ಇದಕ್ಕಾಗಿ ವೆಚ್ಚ ಮಾಡಿದ ಹಣವೆಷ್ಟು ಹಾಗೂ ವಿವಿಧ ಜಿಲ್ಲೆಗಳಲ್ಲಿ ಕಾಯಿಲೆಯ ಎಷ್ಟು ಪ್ರಕರಣಗಳು ಪತ್ತೆಯಾಗಿದೆ;

ಇ) ಈ ಕಾಯಿಲೆಯನ್ನು ಸಂಪೂರ್ಣವಾಗಿ ತಡೆಗಟ್ಟಲು ಇಲ್ಲದೆ ಹತೋಟಿಯಲ್ಲಿಡಲು ಸರ್ಕಾರ ಯಾವ ಕಾರ್ಯಕ್ರಮಗಳನ್ನು ರೂಪಿಸಿದೆ?

ಶ್ರೀ ಧರ್ಮಸಿಂಗ್ (ಮುಖ್ಯಮಂತ್ರಿಗಳು) :

ಅ) ಗೋಶಾಲೆಗಳ ಪ್ರಾರಂಭ
ಮೇವು ನಿಧಿಗಳ ಸ್ಥಾಪನೆ
ರೈತರಿಗೆ ಮೇವು ಸಾಗಾಣಿಕೆ ರಿಯಾಯತಿ
ಔಷಧಿಗಳ ಖರೀದಿ

ಪಂಜಾಬ್ ರಾಜ್ಯದಿಂದ ಮೇವು ಅಮದು
ಮೇವು ಬೀಜಗಳ ಕಿರುಪೊಟ್ಟಣ ಪೂರೈಕೆ
ವಿವಿಧ ರೋಗಗಳ ವಿರುದ್ಧ ಮುಂಜಾಗ್ರತೆ ಲಸಿಕೆ ಕಾರ್ಯಕ್ರಮ

ಆ) ಜಿಲ್ಲಾವಾರು ಖರ್ಚಿನ ವಿವರ ಅನುಬಂಧದಲ್ಲಿ ನೀಡಿದೆ.

ಮೇಲ್ಕಂಡ ಕ್ರಮಗಳಿಂದಾಗಿ ಬರಗಾಲಕ್ಕೆ ಸಂಬಂಧಿಸಿದ ಕಾಯಿಲೆಗಳು ರಾಜ್ಯದಲ್ಲಿ ವರದಿಯಾಗಿರುವುದಿಲ್ಲ.

ಇ) ಉದ್ಭವಿಸುವುದಿಲ್ಲ.

ANNEXURE-2

Expenditure incurred to combat Drought

(Rs. in lakhs)

Sl No	District	Transport ton of Fodder	Fodder seed packet programme	Veterinary Medicines	Fodder Banks& Goshalas	Purchase of fodder	Total expenditure
1	Bangalore(U)	0.226	24.450	4.70	-	-	29.376
2	Bangalore(R)	12.60	30.745	21.40	-	-	64.745
3	Chitradurga	7.79	19.92	11.60	42.350	118.750	200.410
4	Davanagere	1.80	15.65	12.50	1.990	34.590	66.530
5	Kolar	3.30	45.11	14.77	21.520	-	84.700
6	Shimoga	-	8.10	15.77	-	-	23.870
7	Tumkur	4.50	18.00	19.94	25.110	17.080	84.630
8	Mysore	-	16.00	13.70	-	2.640	32.340
9	Mandya	-	9.00	12.00	-	-	21.000
10	Chickamagalur	-	4.975	8.80	1.160	-	14.936
11	D.Kannada	--	-	-	-	-	0.000
12	Udupi	-	-	-	-	-	0.000
13	Hassan	1.18	11.905	16.68	-	-	29.765
14	Kodagu	-	1.00	-	-	-	1.000
15	C' nagar	1.404	14.99	7.50	2.940	2.250	29.084
16	Belgaum	-	9.00	50.00	40.490	29.666	129.156
17	Bijapur	-	6.50	9.40	0.008	10.000	25.908
18	Dharwad	-	7.00	6.30	0.174	-	13.474
19	Gadag	25.00	4.90	9.30	117.850	101.000	258.050
20	Haveri	3.20	1.00	10.00	63.680	0.778	80.658

21	Uttara Karnataka	-	-	5.70	-	-	5.700
22	Bellary	21.29	2.574	14.31	2.270	11.678	52.522
23	Bidar	-	4.25	6.75	-	-	11.000
24	Gulbarga	-	7.28	22.87	-	-	30.350
25	Raichur	6.13	9.00	10.53	3.650	9.780	39.090
26	Koppal	14.00	2.50	15.60	64.750	34.950	150.800
27	Bagalkote	0.42	2.50	11.70	9.000	9.640	52.260
	Total Plus	102.840	316.95	331.82	396.942	382.802	1531.354

Note: 1. Expenditure for strengthening state livestock fatris: Rs. 130.152 lakhs

2. Expenditure for purchase of fodder from Punjab: Rs. 55.56 lakhs

Grand Total of Expenditure: 1717.066 lakhs

463(746) ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ (ಔರಾದ್) : ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ ?

ಅ) ಬೀದರ್‌ನಲ್ಲಿ ಸ್ಥಾಪಿಸಲು ಉದ್ದೇಶಿಸಿರುವ ಪಶುಸಂಗೋಪನೆ ವಿಶ್ವವಿದ್ಯಾನಿಲಯಕ್ಕೆ ಯಾವಾಗ ಮಂಜೂರಾತಿಯನ್ನು ಪಡೆದುಕೊಳ್ಳಲಾಗಿತ್ತು?

ಆ) ಈ ದಿಸೆಯಲ್ಲಿ ಇಲ್ಲಿಯವರೆವಿಗೆ ಯಾವ ಯಾವ ಕಾರ್ಯಕ್ರಮಗಳನ್ನು ಹಾಕಿಕೊಳ್ಳಲಾಗಿದೆ

ಇ) ಯಾವ ಯಾವ ಜಿಲ್ಲೆಗಳು ಈ ವಿಶ್ವವಿದ್ಯಾನಿಲಯದ ವ್ಯಾಪ್ತಿಗೆ ಬರುತ್ತವೆ

ಈ) ಇದಕ್ಕಾಗಿ ಎಷ್ಟು ಎಕರೆ ಭೂಮಿಯನ್ನು ಸ್ವಾಧೀನ ಪಡಿಸಿಕೊಳ್ಳಲಾಗಿದೆ

ಉ) ವಿಶ್ವವಿದ್ಯಾನಿಲಯವನ್ನು ಸ್ಥಾಪಿಸಲು ಅನುಕೂಲವಾಗುವಂತೆ ಸರ್ಕಾರದಿಂದ ಇಲ್ಲಿಯವರೆವಿಗೆ ಎಷ್ಟು ಹಣವನ್ನು ಬಿಡುಗಡೆ ಮಾಡಲಾಗಿದೆ

ಊ) ಪ್ರಸಕ್ತ ಸಾಲಿನ ಆಯವ್ಯಯದಲ್ಲಿ ಇದಕ್ಕಾಗಿ ಎಷ್ಟು ಹಣವನ್ನು ನಿಗದಿಪಡಿಸಲಾಗಿದೆ

ಋ) ಈ ವಿಶ್ವವಿದ್ಯಾನಿಲಯದ ಸ್ಥಾಪನೆಯ ಪೂರ್ವದಲ್ಲಿ ಇದರ ಉಸ್ತುವಾರಿಗಾಗಿ ಉನ್ನತ ಅಧಿಕಾರಿಯನ್ನು ನೇಮಿಸಲಾಗಿದೆಯೇ

ೠ) ಹಾಗಿದ್ದಲ್ಲಿ, ಇಲ್ಲಿಯವರೆಗೆ ಅವರು ಮಾಡಿರುವ ಕಾರ್ಯಗಳೇನು ಹಾಗೂ ಈ ವಿಶ್ವವಿದ್ಯಾನಿಲಯವನ್ನು ಪೂರ್ಣಪ್ರಮಾಣದಲ್ಲಿ ಕಾರ್ಯಾರಂಭಗೊಳಿಸಲು ಅಗತ್ಯವಿರುವ ಸಮಯ ಎಷ್ಟು?

ಶ್ರೀ ಧರ್ಮಸಿಂಗ್ (ಮುಖ್ಯಮಂತ್ರಿಗಳು) :

ಅ) ದಿನಾಂಕ 28-02-2004ರಂದು ಸರ್ಕಾರದ ಆದೇಶ ಸಂಖ್ಯೆ: ವಸಂಮೀ:150:ವಅಸೇ: 2004ರ ಪ್ರಕಟಣೆ ಮೂಲಕ ಕರ್ನಾಟಕ ಪಶು ಮತ್ತು ಮೀನುಗಾರಿಕೆ ವಿಶ್ವವಿದ್ಯಾನಿಲಯ ಸ್ಥಾಪನೆಗೊಂಡಿದೆ.

ಆ) 157.27 ಎಕರೆ ವಿಸ್ತೀರ್ಣ ಭೂಮಿಯನ್ನು ವಿಶ್ವವಿದ್ಯಾನಿಲಯಕ್ಕೆ ಗುರುತಿಸಲಾಗಿದೆ. ಕುಲಪತಿಗಳ ನೇಮಕಾತಿ ಪ್ರಕ್ರಿಯೆ ಸರ್ಕಾರದ ತೀವ್ರ ಪರಿಶೀಲನೆಯಲ್ಲಿದೆ. ಕುಲಪತಿಗಳ ನೇಮಕಾತಿಯಾದ ಕೂಡಲೇ ವಿಶ್ವವಿದ್ಯಾನಿಲಯ ಪ್ರಾರಂಭಗೊಳ್ಳಲಿದೆ.